# ಮೊದಲೇ ಗೊತ್ತಿತ್ತು...

**ಏನಾದರೂ ಅಚಾತುರ್ಯ ನಡೆದಾಗ ಇಲ್ಲವೇ ಎಡವಟ್ಟಾದಾಗ ಉರಿಯುವ ಬೆಂಕಿಗೆ ತುಪ್ಪ ಸುರಿಯುವಂತೆ ‘ನನಗೆ ಮೊದಲೇ ಗೊತ್ತಿತ್ತು...’ ಎಂಬ ರಾಗವೊಂದು ಯಾರಿಂದಲಾದರೂ ಕೇಳಿಬಂದಾಗ ಬರುವ ಕೋಪ ಅಂತಿಂಥದ್ದಲ್ಲ...**

**■ ಶಾರದಾ ವಿ. ಮೂರ್ತಿ**

ಯಾವುದಾದರೂ ಒಂದು ಕಾರ್ಯವನ್ನು ಪರಿಶ್ರಮದಿಂದ ಮಾಡಿದರೂ ಫಲಿತಾಂಶ ನಮ್ಮ ನಿರೀಕ್ಷೆಯಂತೆ ಬಾರದಿದ್ದಾಗ, ‘ಹೀಗಾಗತ್ತೆ ಅಂತ ಮೊದಲೇ ಗೊತ್ತಿತ್ತು’ ಎಂದು ಬೇರೆಯವರು ನುಡಿದರೆ ನಮಗೆ ಹೇಗಾಗಬೇಡ!

ಅದೊಂದು ದಿನ ಊರ ಹೊರಗಿನ ಬಡಾವಣೆಯಲ್ಲಿ ನಮ್ಮ ಸಂಬಂಧಿಕರ ಗೃಹಪ್ರವೇಶವಿತ್ತು. ಗೊತ್ತಿಲ್ಲದ ಸ್ಥಳ. ಸಾಕಷ್ಟು ಸುತ್ತಿ ವಾಹನ ದಟ್ಟಣೆಯಲ್ಲಿ ಪ್ರಯಾಸದಿಂದ ಡ್ರೈವ್ ಮಾಡಿಕೊಂಡು ಅಲ್ಲಿಗೆ ತಲುಪುವಾಗ ಸಾಕು ಸಾಕಾಗಿತ್ತು. ಅದಾಗಲೇ ಮೊದಲೇ ಅಲ್ಲಿಗೆ ಬಂದಿದ್ದ ಗೆಳೆಯ, ‘ಕೊಂಕಣ ಸುತ್ತಿ ಮೈಲಾರಕ್ಕೆ ಹೋದಹಾಗೆ ಆಯಿತು. ಫೋನಿನಲ್ಲಿ ಡೈರೆಕ್ಷನ್ ನೋಡಿ ಡ್ರೈವ್ ಮಾಡಿದರೆ ಹೀಗೇ ಆಗೋದು. ಒಳಗಿನ ದಾರಿಯಲ್ಲೇ ಬರಬಹುದಿತ್ತು. ನನಗೆ ಗೊತ್ತಿತ್ತು, ಹೀಗೇ ಆಗುತ್ತೆ ಅಂತ’ ಎಂದು ಹೇಳಿದಾಗ ಸಿಟ್ಟು ನೆತ್ತಿಗೇರಿತ್ತು. ಆ ಒಳಗಿನ ದಾರಿ ಬಗ್ಗೆ ಮೊದಲು ಅವರು ಯಾಕೆ ತಿಳಿಸಲಿಲ್ಲವೋ ತಿಳಿಯದು.

ಒಮ್ಮೆ ಮನೆಗೆ ಬಂದ ಗೆಳತಿಯನ್ನು ಅಡುಗೆಮನೆಯಲ್ಲೇ ಕೂರಿಸಿ ಮಾತನಾಡುತ್ತಾ ಸ್ಟೌ ಮೇಲೆ ಹಾಲು ಕಾಯಿಸುತ್ತಿದ್ದೆ. ಮಂದವಾದ ಕಾಫಿ ಡಿಕಾಕ್ಷನ್ ಹನಿ ಹನಿಯಾಗಿ ಕೆಳಗಿಳಿಯುತ್ತಿತ್ತು. ಕಪ್ ತೆಗೆದು ಸಿದ್ಧ ಮಾಡಿಕೊಳ್ಳುವಷ್ಟರಲ್ಲಿ ಹಾಲು ಬುಸ್ ಅಂತ ಉಕ್ಕಿ ಹೋಗಬೇಕೆ... ಮೇಲಿನ ಕೆನೆ ಹಾಲು ವ್ಯರ್ಥವಾಗಿ ಹರಿದುಹೋದ ಪರಿಗೆ ಬೇಸರ, ಜೊತೆಗೆ ಸ್ಟೌ ಕ್ಲೀನ್ ಮಾಡುವ ರೇಜಿಗೆ ಕೆಲಸ. ಇಷ್ಟರ ನಡುವೆ, ‘ನಂಗೊತ್ತಿತ್ತು ಹೀಗಾಗತ್ತೆ ಅಂತ... ಹಾಲು ಕಾಯಿಸುವಾಗ ಬೇರೆ ಕಡೆ ಗಮನ ಇರಬಾರದು’ ಎಂದು ಗೆಳತಿ ಉಪದೇಶಿಸಿದಾಗ ಬಂದ ಕೋಪವನ್ನು ಹೇಗೋ ತಡೆದುಕೊಂಡಿದ್ದೆ.

ಇನ್ನು ಧಾರಾವಾಹಿ ವೀಕ್ಷಕರು ಆ ಕಥೆಯು ಮುಂದೆ ತೆಗೆದುಕೊಳ್ಳಬಹುದಾದ ತಿರುವುಗಳ ಬಗ್ಗೆ ಗಂಭೀರ ಚರ್ಚೆ ನಡೆಸುತ್ತಿರುತ್ತಾರೆ. ದಿನದ ಅಂದಿನ ಭಾಗ ಮುಗಿದೊಡನೆ, ‘ನಂಗೆ ಗೊತ್ತಿತ್ತು... ಇವತ್ತು ಇಷ್ಟಕ್ಕೇ ಮುಗಿಸ್ತಾರೆ ಅಂತ’ ಎಂದು ಉದ್ಗಾರ ತೆಗೆಯುವವರು ಮತ್ತೆ ಯಾಕೆ ಅಷ್ಟು ಹೊತ್ತು ಟೀವಿ ಮುಂದೆ ಕುಳಿತಿದ್ದರು ಎನ್ನುವುದೇ ಯಕ್ಷಪ್ರಶ್ನೆ.

ಗೆಳತಿಯೊಬ್ಬರು ಟೈಲರ್ ಪರಿಚಯಿಸಿ ಅವರು ಚೆನ್ನಾಗಿ ಬಟ್ಟೆ ಹೊಲಿದು ಕೊಡುವುದಾಗಿ ಹೇಳಿದ್ದರು. ಹೀಗಾಗಿ ಒಂದಿಷ್ಟು ಬಟ್ಟೆಗಳನ್ನು ಆ ಟೈಲರ್‌ಗೆ ಕೊಟ್ಟುಬಂದಿದ್ದೂ ಆಯಿತು. ನಂತರವೇ ಶುರುವಾದದ್ದು ಫಜೀತಿ. ಹೊಲಿದ ಉಡುಪುಗಳನ್ನು ತರಲು ಅದೆಷ್ಟು ಬಾರಿ ಅಂಗಡಿಗೆ ಎಡತಾಕಿದ್ದೆನೋ. ಈ ವಿಷಯವನ್ನು ಬೇಸರದಿಂದ ಗೆಳತಿಗೆ ತಿಳಿಸಿದಾಗ, ‘ಆ ಟೈಲರ್ ಚೆನ್ನಾಗಿ ಹೊಲಿಯೋದೇನೋ ನಿಜ, ಆದರೆ ಆ ಉಡುಪು ನಮ್ಮ ಕೈ ಸೇರುವಾಗ ನಮ್ಮ ಅಳತೆಯೇ ಬದಲಾಗಿ ಹೋಗಿರುತ್ತೆ. ಅವನಿಗೆ ಬಟ್ಟೆ ಕೊಡುವಾಗ ಒಂದು ಮಾತು ನನ್ನನ್ನ ಕೇಳಿದ್ದಿದ್ದರೆ ನಾನು ತಿಳಿಸ್ತಾ ಇದ್ದೆ’ ಎಂದಾಗ ನನಗೆ ಅದೆಷ್ಟು ಕೋಪ ಬಂದಿರಬೇಕು!



ಆಗಷ್ಟೇ ಪ್ರಾರಂಭಗೊಂಡಿದ್ದ ಕೋ ಆಪರೇಟಿವ್ ಬ್ಯಾಂಕ್ ಮ್ಯಾನೇಜರನ್ನು ಸಂಬಂಧಿಕರೊಬ್ಬರು ಪರಿಚಯಿಸಿದ್ದರು. ‘ತುಂಬಾ ಒಳ್ಳೆಯವರು. ಒಂದು ವಿಶೇಷ ಸ್ಕೀಮ್‌ನಲ್ಲಿ ಠೇವಣಿ ಸಂಗ್ರಹ ಮಾಡ್ತಾ ಇದ್ದಾರೆ. ನೋಡಿ, ಒಳ್ಳೆಯ ಆಫರ್’ ಎಂದು ಹೇಳಿದ್ದರು. ಆಗಷ್ಟೇ ನಿವೃತ್ತಿ ಹೊಂದಿದ್ದ ಗೆಳತಿ ಕಿವಿಗೆ ಈ ಮಾತು ಬಿದ್ದಿತ್ತು. ಆಕೆ ಒಂದಷ್ಟು ಲಕ್ಷಗಳನ್ನು ಬ್ಯಾಂಕಿನಲ್ಲಿ ಇಟ್ಟಿದ್ದೂ ಆಯಿತು. ಮೊದಲೊಮ್ಮೆ ಒಳ್ಳೆಯ ಬಡ್ಡಿದರ ಪಡೆದಿದ್ದೂ ಆಯಿತು. ಸ್ವಲ್ಪ ದಿನಗಳಲ್ಲೇ ಆ ಬ್ಯಾಂಕ್ ಬಗ್ಗೆ ಪತ್ರಿಕೆಯಲ್ಲಿ ವರದಿಗಳು ಬರತೊಡಗಿದಾಗ ಗೆಳತಿ ಮೊದಲು ಬ್ಯಾಂಕಿಗೆ ಓಡಿದ್ದಳು. ಮುಚ್ಚಿದ್ದ ಬಾಗಿಲನ್ನು ನೋಡಿ ಕಂಗೆಟ್ಟವಳು ಮ್ಯಾನೇಜರಿಗೆ ಫೋನ್ ಮಾಡಿದರೆ ಕರೆಯನ್ನೇ ಸ್ವೀಕರಿಸಲಿಲ್ಲ. ಗಾಬರಿಗೊಂಡು ಪರಿಚಯಿಸಿದವರ ಬಳಿ ಬಂದು ವಿಚಾರಿಸಿದಳು.

‘ಅವರು ಒಳ್ಳೆಯ ವ್ಯಕ್ತಿಯೇ. ಆದರೆ ಗ್ರಹಚಾರ. ಏನೋ ಆಗಿರಬೇಕು. ನೀವು ಅಷ್ಟು ಹಣ ಇಡುವಾಗ ನನ್ನನ್ನು ಒಂದು ಮಾತು ಕೇಳೋದಲ್ಲವೆ...’ ಅಂತ ತಣ್ಣಗೆ ಹೇಳಿದರೆ, ಗೆಳತಿಯ ಪರಿಸ್ಥಿತಿ ಹೇಗಾಗಿರಬೇಡ.

ಆದರೆ ಮದುವೆ ವಿಷಯದಲ್ಲಿ ಹೀಗೆ ಹೇಳುವುದು ಕಷ್ಟವೇ! ‘ನೂರು ಸುಳ್ಳು ಹೇಳಿ ಒಂದು ಮದುವೆ ಮಾಡು’ ಎಂಬ ಗಾದೆಯೇ ಇದೆ. ನಮ್ಮ ಆತ್ಮೀಯರು, ನಮ್ಮ ಪರಿಚಿತರ ನೆಂಟಸ್ಥನ ಮಾಡುವಾಗ ಹುಡುಗ, ಹುಡುಗಿ ಬಗ್ಗೆ ವಿಚಾರಿಸಿದರೆ ಏನೆಂದು ಹೇಳುವುದು? ಹೀಗೊಂದು ಸಂಬಂಧದ ಬಗ್ಗೆ ನಮ್ಮ ಹತ್ತಿರದವರು ಅಭಿಪ್ರಾಯ ಕೇಳಿದಾಗ ಮೋಟುಗೋಡೆ ಮೇಲೆ ದೀಪ ಇಟ್ಟಂತೆ ಮಾತನಾಡಿದ್ದೆವು.

ಮದುವೆಯೂ ಆಯಿತು. ನಾಲ್ಕಾರು ತಿಂಗಳುಗಳಲ್ಲೇ ವಿಚ್ಛೇದನದ ಹಂತ ತಲುಪಿತ್ತು. ‘ಮೊದಲೇ ಗೊತ್ತಿತ್ತು ಹೀಗಾಗುತ್ತೆ ಅಂತ’ ಎಂಬ ಮಾತನ್ನು ಕಷ್ಟಪಟ್ಟು ತಡೆದುಕೊಂಡುಬಿಟ್ಟೆ. ಆ ಸತಿಪತಿಯರು ಈಗ ಕೂಡ ಜಗಳ ಆಡಿಕೊಂಡೇ ಸಂಸಾರ ನಡೆಸುತ್ತಿದ್ದಾರೆ.

ಆದ್ದರಿಂದ ಮುಂದೆ ಏನಾಗುತ್ತೋ ಎಂದು ಈಗಲೇ ಹೇಳುವುದು ನಮಗಂತೂ ಬಲು ಕಷ್ಟ.

ಪ್ರತಿಕ್ರಿಯಿಸಿ: feedback@sudha.co.in